ಮೈಸೂರ ಗೆಜೆಟ್.

ನಂ. 38.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 44.

ಬೆಂಗಳೂರು, ಗುರುವಾರ, ನವಂಬರ್ ತಾ|| 12, ಸನ್ 1903.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರನಾಮೆಗಳು.

2ನೆ ಭಾಗ—ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫಿಸರಗಳು, ಫಾರೆಸ್ಟು, ರಜಿಸ್ಟ್ರೇಷನ್ ವ ಯಡ್ಯುಕೇಷನ್ ಇನ್ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸಗಳು.

3ನೆ ಭಾಗ—ಲೆಜಿಸಲೇಟಿವ ರಗ್ಯುಲೇಷನಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 14ನೆ ಆಕ್ಟೋಬರ 1903.

ನಂ. ಲೋ. ಜೋ. ಪಿ. 423, ಮದರಾಸು ಗವರ್ನಮೆಂಟಿನವರಿಂದ ಕೊಡೋಣಾದ ಇದರಡೀ ಕಂಡ ಇಸ್ತಿಹಾರ್ನಾಮೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಮರಳೀ ಫಾಯಿಷ್ಮಾಡಲ್ಪಟ್ಟಿರುತ್ತೆ.

ನೀಲಗಿರಿ ಜಿಲ್ಲಾ ಉಟಕಮಂಡ್‌ನಲ್ಲಿ ಪ್ಲೇಗ್ ರೋಗವು ಇರುವದ್ದರಿಂದಲೂ ಮತ್ತು ಅದು ಹರಡದಂತೆ ಮಾಡುವದು ಯುಕ್ತವೆಂತ ತೋರುವದ್ದರಿಂದಲೂ ರಂಜಾನ್ ತಿಂಗಳ ಅಂತ್ಯ ಭಾಗವೂ ನಂತರ ಬರುವ ಷವ್ವಾಲ್ ತಿಂಗಳ ಮೊದಲುವಾರವೂ ಸೇರಿ ಆಗುವ 1903ನೆ ಇಸವಿ ಡಿಸೆಂಬರು 5ನೆ ತಾರೀಖಿನಿಂದ ಅದೇ ಮಾಹೆಯ 27ನೆ ತಾರೀಖಿನ ವರೆಗೂ ಉಭಯ ದಿನಗಳೂ ಸೇರಿ, ಭಿಕ್ಷಗಾರರು ಮತ್ತು ದೇಶಗೇಡಿಗಳು ಉಟಕಮಂಡ್‌ಗೆ ಪ್ರಯಾಣ ಮಾಡಕೂಡದೆಂತಲೂ ಅದನ್ನು ಪ್ರವೇಶ ಮಾಡಕೂಡದೆಂತಲೂ ಅಲ್ಲಿ ನಿಲ್ಲಕೂಡದೆಂತಲೂ ಮಂತ್ರಾಲೋಚಕ ಸಮಾಜ ಸಹಿತರಾದ ಗವರ್ನರವರು ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ ಕಾನೂನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ನಿರೋಧಿಸುತ್ತಾರೆ. ಮತ್ತು ಉಟಕಮಂಡ್‌ಗೆ ಪ್ರಯಾಣ ಮಾಡುವ ಯಾ ಪ್ರಯಾಣ ಮಾಡುವದಾಗಿ ನಂಬಲು ಕಾರಣವುಳ್ಳ ಯಾವ ಭಿಕ್ಷಗಾರ ಅಥವಾ ದೇಶಗೇಡಿಯಾಗಲಿ, ನೀಲಗಿರಿ—ಮಲಬಾರ್ ಮತ್ತು ಕೊಯಿಮತ್ತೂರು ಜಿಲ್ಲಾ ಕಲೆಕ್ಟರುಗಳು ತಮಗೆ ಸೂಕ್ತವಾದಂತೆ ಏರ್ಪಾಡು ಮಾಡಿದ ಸ್ಥಳಗಳಲ್ಲಿ ನಿಲ್ಲಬೇಕೆಂತಲೂ ಮತ್ತು ಸದರಿ ಕಲೆಕ್ಟರುಗಳಿಂದ ಇದಕ್ಕಾಗಿ ನೇಮಿಸಲ್ಪಟ್ಟ ಆಫಿಸರುಗಳ ಅಪ್ಪಣೆಯಂತೆ ನಡೆಯತಕ್ಕದ್ದೆಂತಲೂ ತಾತ್ಕಾಲಿಕ್ಕೆ ವಿಧಾಯಿಸುತ್ತಾರೆ.

ತಾರೀಖು 17ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 435, ಇಂಡಿಯಾ ಗವರ್ನ್‌ಮೆಂಟಿನಿಂದ ಸನ್ 1903ನೆ ಇಸವಿ ಸೆಪ್ಟಂಬರು 30ನೆ ತಾರೀಖಿನಲ್ಲಿ ಕೊಡೋಣಾದ 1485ನೆ ನಂಬರು ಇಸ್ತಿಹಾರ್ನಾಮೆಯನ್ನು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪುನಃ ಫಾಯಿಷ್ಮಾಡಲ್ಪಟ್ಟಿರುತ್ತೆ.

ಸನ್ 1902ನೆ ಇಸವಿ ಅಕ್ಟೋಬರು 25ನೆ ಮಾರ್ಕಂ ಹೋಂ ಡಿಪಾರ್ಟ್‌ಮೆಂಟಿನ 2278ನೆ ನಂಬರು ಇಸ್ತಿಹಾರ್ನಾಮೆಯಲ್ಲಿ ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIIನೆ ನಂಬರು ಕಾನೂನಿನ 2ನೆ ಪ್ರಕರಣಕ್ಕೆ ಸೇರಿದ 1ನೆ ಅಧೀನಪ್ರಕರಣವನ್ನನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಮಂತ್ರಾಲೋಚಕ ಸಮಾಜ ಸಹಿತರಾದ ಗವರ್ನರ್ ಜನರಲ್ ಸಾಹೇಬ್ ಬಹದ್ದೂರ್ರವರು ಸನ್ 1903ನೆ ಇಸವಿಯಲ್ಲಿ ಹೆಡ್‌ಜಾಜ್ ಯಾತ್ರೆಗೆ ಹೊರಡತಕ್ಕ ಕಾಲದಲ್ಲಿ ಬೊಂಬಾಯಿ ಆಧಿಪತ್ಯದಲ್ಲಿರುವ ರೇವುಗಳಾದ ಬೊಂಬಾಯಿ ಮತ್ತು ಕರಾಚಿ ಇವುಗಳಿಂದಲೂ ಬಂಗಾಳ ಆಧಿಪತ್ಯದಲ್ಲಿರುವ ಚಿಟಗಾಂಗ್‌ನಿಂದಲೂ ಸದರಿ ಯಾತ್ರೆಗೆ ಹೋಗಲು ಇಂಡಿಯಾ ದೇಶದ ಯಾವ ನಿವಾಸಿಗಾದರೂ ಕೆಲವು ಎಚ್ಚರಿಕೆಗಳಿಗೆ ಒಳಪಟ್ಟು ಅಪ್ಪಣೆ ಕೊಡಬಹುದೆಂದು ಹುಕುಂ ಮಾಡಿದರು.

2. ಸನ್ 1902ನೆ ಇಸವಿಯ ಮತ್ತು ಇದರ ಹಿಂದಿನ ಸಾಲುಗಳ ಯಾತ್ರಾ ಕಾಲದಲ್ಲಿ ಜಾರಿ ಮಾಡಿದ ಎಚ್ಚರಿಕೆಗಳ ಪೈಕಿ ಪ್ರಯಾಣಾಪೇಕ್ಷೆಯುಳ್ಳ ಯಾತ್ರಿಕರೆಲ್ಲರನ್ನೂ ಅವರವರ ಊರುಗಳಿಗೆ ಸಮೀಪದಲ್ಲಿ ಆಯಾ ನಾಡಿನ ಅಜಮಾಯಿಷಿ ಪಾಳೆಯದಲ್ಲಿ ಸೇರಿಸಿ 10 ದಿನಗಳ ಮಟ್ಟಿಗಾದರೂ ನಿಲ್ಲಿಸಿ ಅವರು ಹಡಗನ್ನೇರುವ ರೇವು ಪಟ್ಟಣಗಳಲ್ಲಿಯಾಗಲಿ ಅವುಗಳ ಸಮೀಪದಲ್ಲಿರುವ ಮುಖ್ಯವಾದ ಪಾಳೆಯಕ್ಕೆ ಪ್ರತ್ಯೇಕವಾದ ರೈಲ್ವೆ ಟ್ರೇನ್‌ಗಳಲ್ಲಿಯಾಗಲಿ ಅಥವಾ ಬಂಡಿಗಳಲ್ಲಿಯಾಗಲಿ ರವಾನಿಸುವದಕ್ಕೆ ಮುಂಚೆ ಅವರವರ ಬಟ್ಟೆಬರೆಗಳನ್ನು ಸೋಂಕು ಹೋಗುವಂತೆ (ಡಿಸಿಂಫೆಕ್ಟ್) ಮಾಡುವುದು ಒಂದು ಅಂಶವಾಗಿತ್ತು. ಇಂಡಿಯಾ ಗವರ್ನ್‌ಮೆಂಟಿನವರಿಗೆ ಅಸಮ್ಮತವಾದ ಖಡದಾದ ಏರ್ಪಾಡುಗಳನ್ನು ಜಾರಿ ಮಾಡದೆ ನಾಡಿನ ಪಾಳಯದಲ್ಲಿ ಯಾತ್ರಿಕರನ್ನು ಮೊದಲು ತಡೆಯುವುದು ಸಾಧ್ಯವೇ ಅಲ್ಲವೆಂತಲೂ ಒಂದುವೇಳೆ ಸಾಧ್ಯವಾದರೂ ಬಹಳ ಕಷ್ಟವೆಂತಲೂ ಅನುಭವಸಿದ್ಧವಾಗಿರುವುದು. ಆದ್ದರಿಂದ ಘನವನ್ನು ಹೊಂದಿದ ಚಕ್ರವರ್ತಿಯವರ ಗವರ್ನ್‌ಮೆಂಟಿನ ಸಮ್ಮತಿಯಿಂದ ಬರುವ ಯಾತ್ರಾ ಕಾಲದಲ್ಲಿ ಯಾತ್ರಿಕರನ್ನು ನಿಲ್ಲಿಸುವುದಕ್ಕೆ ನಾಡಿನ ಪಾಳಯಗಳನ್ನು ಏರ್ಪಡಿಸಕೂಡದೆಂತಲೂ ಮತ್ತು ಯಾತ್ರಿಕರು ಹಡಗನ್ನೇರುವ ರೇವುಗಳಲ್ಲಿ ಏರ್ಪಾಡು ಮಾಡಿದ ದೊಡ್ಡ ಪಾಳಯಗಳಿಗೆ ಸೀದಾ ಹೋಗಬಹುದೆಂತಲೂ ತೀರ್ಮಾನಿಸಿರುತ್ತಾರೆ. ಆದರಂತೆ ಕೆಳಗೆ ನಮೂದಿಸಿರುವ ಕಾನೂನುಗಳಿಗೆ ಒಳಪಟ್ಟು ಇಂಡಿಯಾ ದೇಶದ ಯಾವ ನಿವಾಸಿಯಾಗಲಿ ಬರುವ ಯಾತ್ರಾ ಕಾಲದಲ್ಲಿ ಹಾಜ್‌ಗೆ ಹೋಗಬಹುದು.

3. ಸನ್ 1902ನೆ ಇಸವಿ ಅಕ್ಟೋಬರು 25ನೆ ಮಾರ್ಕೂಮಿನ ಹೋಂ ಡಿಪಾರ್ಟ್‌ಮೆಂಟಿನ 2278ನೆ ನಂಬರು ಇಸ್ತಿಹಾರ್ನಾಮೆಯಲ್ಲಿನ ಹುಕುಂಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತವೆ.

4. ಮಂತ್ರಾಲೋಚನೆಯ ಸಮಾಜ ಸಹಿತರಾದ ಗವರ್ನರ್ ಜನರಲ್ ಸಾಹೇಬ್ ಬಹದ್ದೂರ್ರವರು.

(i) ಬೊಂಬಾಯಿ ಆಧಿಪತ್ಯದಲ್ಲಿನ ಬೊಂಬಾಯಿ ರೇವು ಬಂಗಾಳ ಆಧಿಪತ್ಯದಲ್ಲಿನ ಚಿಟಗಾಂಗ್ ರೇವು ಇವುಗಳು ವಿನಾ ಯಾವ ರೇವಿನಿಂದಲೂ ಮೆಕ್ಕಾ ಯಾತ್ರೆಗೆ ಹೋಗುವ ಉದ್ದೇಶದಿಂದ ಯಾವ ಮನುಷ್ಯನಿಗಾಗಲಿ ಹಡಗೇರುವುದಕ್ಕೆ ಅಪ್ಪಣೆ ಕೊಡತಕ್ಕದ್ದಲ್ಲವೆಂತಲೂ—

(ii) ಹಡಗನ್ನೇರುವ ರೇವಿನ ಅಥವಾ ಅದರ ಸಮೀಪದಲ್ಲಿ ಏರ್ಪಾಟು ಮಾಡಲ್ಪಟ್ಟ ಸ್ಥಳದಲ್ಲಿ ಆ ಸ್ಥಳದ ಛಾರ್ಜ್‌ನಲ್ಲಿರುವ ಮೆಡಿಕಲ್ ಆಫೀಸರಿಗೆ ಯಾತ್ರೆಯ ಉದ್ದೇಶದಿಂದ ಪ್ರಯಾಣ ಮಾಡುವ ಮನುಷ್ಯನು ಪ್ಲೇಗ್ ರೋಗದ ಸೋಂಕನ್ನು ತನ್ನ ಸಂಗಡ ತೆಗೆದುಕೊಂಡು ಹೋಗುವ ಅಪಾಯವು ನಿಶ್ಶೇಷವಾಗಿ ಹೋಯಿತೆಂದು ದೃಢವಾಗಿ ತೋರುವವರೆಗೂ ಅಂತಹ ಸ್ಥಳದಲ್ಲಿ ಅಜಮಾಯಿಷಿಯಲ್ಲಿಡಲ್ಪಟ್ಟಿದ್ದ ಹೊರತು ಯಾವ ಮನುಷ್ಯನು ಅಂತಹ ರೇವಿನಿಂದ ಅಂತಹ ಉದ್ದೇಶದೊಡನೆ ಹಡಗನ್ನೇರುವವಕ್ಕೆ ಅಪ್ಪಣೆ ಕೊಡತಕ್ಕದ್ದಲ್ಲವೆಂತಲೂ—

(iii) ಯಾತ್ರಿಕರನ್ನು ಅಜಮಾಯಿಷಿಯಲ್ಲಿ ನಿಲ್ಲಿಸುವದಕ್ಕೆ ಏರ್ಪಡಿಸಿರುವ ಸ್ಥಳಗಳು ವಿನಾ ಬೇರೆ ಸ್ಥಳಗಳಲ್ಲಿ ಸದರಿ ಯಾತ್ರಿಕರಿಗೆ ಪ್ರಯಾಣದ ಟಿಕೆಟ್ಟುಗಳನ್ನು ಮಾರತಕ್ಕದ್ದಲ್ಲವೆಂತಲೂ—ಅಜ್ಞಾಪಿಸಿರುತ್ತಾರೆ.

5. ಮೇಲ್ಕಂಡ ಎಚ್ಚರಿಕೆಗಳಿಗೆ ಒಳಪಟ್ಟು ಹೆಡ್‌ಜಾಜ್‌ಗೆ ಯಾತ್ರೆ ಹೊರಡುವುದಕ್ಕೆ ಅಪ್ಪಣೆ ಕೊಡಬಹುದೆಂದು ಇಂಡಿಯಾ ಗವರ್ನ್‌ಮೆಂಟಿನವರು ತೀರ್ಮಾನಿಸಿದ್ದಾಗ್ಯೂ ಮುಖ್ಯವಾಗಿ ತುರ್ಕಿ ಗವರ್ನ್‌ಮೆಂಟಿನಿಂದ ವಿಧಿಸಲ್ಪಟ್ಟಿರುವ ಖಂಡಿತವಾದ ಕ್ವಾರಂಟೈನ್ ನಿಬಂಧನೆಗಳನ್ನು ಮತ್ತು ಅರಬ್ಬೀದೇಶಕ್ಕೆ ಸೇರಿದ ಕೂಡ್ಲೆ ಯಾತ್ರಿಕರಿಗೆ ಉಂಟಾಗುವ ಅನಾನುಕೂಲ್ಯವನ್ನು ಕಷ್ಟವನ್ನೂ ಆಲೋಚಿಸಿ ಮುಂದಿನ ಯಾತ್ರಾಕಾಲದವರೆಗೂ ಅವರ ಉದ್ದೇಶಗಳನ್ನು ನೆರವೇರಿಸುವುದನ್ನು ತಳ್ಳಬೇಕೆಂದು ಯಾತ್ರಿಕರಿಗೆ ಚನ್ನಾಗಿ ಬುದ್ಧಿ ಹೇಳಬೇಕೆಂದು ಗತ ವರ್ಷದಲ್ಲಿ ಕೊಟ್ಟ ಎಚ್ಚರಿಕೆಯನ್ನು ಪುನಃ ಕೊಡುವುದು ಇಂಡಿಯಾ ಗವರ್ನ್‌ಮೆಂಟಿನವರಿಗೆ ಅವಶ್ಯವಾಗಿ ತೋರುತ್ತದೆ.

ತಾರೀಖು 20ನೆ ಅಕ್ಟೋಬರು 1903.

ನಂ. 441—ಲೋ. ಬೋ. ಪಿ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, 1903ನೆ ಜುಲೈ 8ನೆ ಮಾರ್ಕಂ ಲೋ. ಬೋ. ಪಿ. 29ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಳಿಗಿಂತ ಜಾಸ್ತಿಯಾಗಿ ಪ್ಲೇಗ್ ರೋಗವು ಇಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಸಂಕೇನಹಳ್ಳಿ	... ಹಾಸನ	3. ರಂಗಾಪುರ	.. ಅರಸೀಕೆರೆ
2. ಚನ್ನಪಟ್ಣ	... ಡಿಟೋ	4. ಹುಲ್ಲಕಲ್	.. ಅರಕಲಗೂಡು

ತಾರೀಖು 20ನೆ ಅಕ್ಟೋಬರ್ 1903.

ನಂ. ಲೋ. ಬೋ. ಪಿ. 439, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧ ಪಡಿಸುವದೇನಂದರೆ—ಸಾಂಕ್ರಾಮಿಕ ರೋಗಗಳ ಕಾನೂನನ್ನು ಅನುಸರಿಸಿ 1898ನೆ ಫೆಬ್ರುವರಿ 10ನೆ ಮರ್ಕುಂ 9393—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರು ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ಕಾನೂನುಗಳ ಉದ್ದೇಶಗಳಿಗಾಗಿ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು "ರೋಗ ತಗಲಿದ್ದ ಪ್ರದೇಶಗಳಾಗಿ" ಎಣಿಸಲ್ಪಡತಕ್ಕದ್ದು:—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ದೊಡ್ಡ ಆಲದಹಳ್ಳಿ ...	ಹಾಸನ	17.	ಬೇಲೂರು ..	ಬೇಲೂರು
2.	ಅಮ್ಮನಗುಡಿ ಕೊಪ್ಪಲ್ ...	ಡಿಟೋ	18.	ಮುದುಗೆರೆ	ಡಿಟೋ
3.	ಹಲಿವಾಗಲ್ ...	ಡಿಟೋ	19.	ಅಗ್ರಹಾರ ..	ಚನ್ನರಾಯಪಟ್ಣ
4.	ಕಡಯ	ಡಿಟೋ	20.	ಜಕ್ಕೇನಹಳ್ಳಿ ..	ಡಿಟೋ
5.	ಬಾಕೇನಹಳ್ಳಿ ..	ಡಿಟೋ	21.	ಜಡಿಗಾನಹಳ್ಳಿ ..	ಡಿಟೋ
6.	ಸಿದ್ದಾಪುರ ...	ಡಿಟೋ	22.	ಬಾಗೂರು ..	ಡಿಟೋ
7.	ಗೋವಿಂದಪುರ ..	ಡಿಟೋ	23.	ಮೂದನಹಳ್ಳಿ ..	ಡಿಟೋ
8.	ಅಮ್ಮಿಗನಹಳ್ಳಿ ...	ಡಿಟೋ	24.	ಆಡಿಹಳ್ಳಿ ...	ಡಿಟೋ
9.	ಸಾಮಪುರ ..	ಡಿಟೋ	25.	ಓಬಳಾಪುರ ...	ಡಿಟೋ
10.	ಚಿಕ್ಕ ಬ್ಯಾಡಗೆರೆ ..	ಬೇಲೂರು	26.	ಚಾವೇನಹಳ್ಳಿ	ಡಿಟೋ
11.	ಹಿರಿಹಸದೆ ..	ಡಿಟೋ	27.	ಮುಗಳಿಕೊಪ್ಪಲ್ ..	ಆಲೂರು (ಸಬ್ ತಾ॥)
12.	ಕನಾಯಿಕನಹಳ್ಳಿ ..	ಡಿಟೋ	28.	ಆನೆಹಳ್ಳದ ಕೊಪ್ಪಲ್ ..	ಡಿಟೋ
13.	ಕಂದಾವರ .	ಡಿಟೋ	29.	ಕಟ್ಟೆಗೋಡು ...	ಡಿಟೋ
14.	ದನಾಯಿಕನಹಳ್ಳಿ ..	ಡಿಟೋ	30.	ಚಿಗಲೂರು ..	ಡಿಟೋ
15.	ಅಂದಲೆ ..	ಡಿಟೋ	31.	ಕಾಮಸಂದ್ರ ..	ಅರಸೀಕೆರೆ
16.	ಕರಗದ ..	ಡಿಟೋ			

ತಾರೀಖು 10ನೆ ನವೆಂಬರ್ 1903.

ನಂ. ಲೋ. ಬೋ. ಪಿ. 560, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನ್ಮೆಂಟಿನವರು ಆಕ್ಷೇಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಕಂದನಕುಂಡಂ ಉತ್ಸವ ಎಂದು ಪ್ರಸಿದ್ಧವಾದ ದುರ್ಗಾ ಉತ್ಸವ	ಸತ್ತೆಗಾಲ್ ಗ್ರಾಮಕ್ಕೆ ಶೇರಿದ ಕುಗ್ರಾಮವಾದ ಶಿವಸಮುದ್ರ	ಕೊಳ್ಳೇಗಾಲ್	ಕೊಯಮುತ್ತೂರು	2ನೆ ಡಿಶಂಬರ 1903	11ನೆ ಡಿಶಂಬರ 1903	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 1199—ಪಿ., ತಾ॥ 9-11-03

ತಾರೀಖು 11ನೆ ನವೆಂಬರ್ 1903.

ನಂ. ಲೋ. ಬೋ. ಪಿ. 565, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು, 6 ತಿಂಗಳುಗಳಿಂದ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ.

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಚಿತ್ರದುರ್ಗ ಟವನಿಗೆ ಸೇರಿದ ಕುಗ್ರಾಮವಾದ ಬುರುಜಹಟ್ಟಿ.	ಚಿತ್ರದುರ್ಗ	3.	ಮಾದನಾಯಕನಹಳ್ಳಿ ...	ಚಿತ್ರದುರ್ಗ.
			4.	ಅಯತೊಳಲು ...	ಡಿಟೋ
2.	ಚಿತ್ರದುರ್ಗ ಟವರ್ನ ...	ಡಿಟೋ	5.	ಮಳೆಬೆನ್ನೂರು ...	ಹರಿಹರ ಸಬ್ ತಾಲ್ಲೂಕು.

ತಾರೀಖು 11ನೆ ನವೆಂಬರ್ 1903.

ನಂ. ಲೋ. ಬೋ. ಪಿ. 567, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮರ್ಕುಂ 9383—ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್ನಗಳ ಉದ್ದೇಶಗಳಿಗಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಹೊಳಲಕೆರೆ ಟವರ್ನ ...	ಹೊಳಲಕೆರೆ	6.	ಬಸಾಪುರ ..	ದಾವಣಗೆರೆ
2.	ಹನಗರಡಿ ..	ಹರಿಹರ ಸಬ್ ತಾಲ್ಲೂಕು	7.	ಕಕ್ಕರಗೊಳ ...	ಡಿಟೋ
3.	ಬಿಲಸನೂರು ..	ಡಿಟೋ	8.	ಕಲಪನಹಳ್ಳಿ ...	ಡಿಟೋ
4.	ಕಮಲಾಪುರ ...	ಡಿಟೋ	9.	ಕೋಗುಂದೆ	ಚಿತ್ರದುರ್ಗ
5.	ಆವೇರಗೊಳ ...	ದಾವಣಗೆರೆ			

ತಾರೀಖು 24ನೆ ಅಕ್ಟೋಬರ್ 1903.

ನಂ. 831—ಜ್ಯು. 16—1900-01, ಸನ್ 1883ನೆ ಇಸವಿಯ Iನೆ ನಂಬರ್ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 5ನೆ ಸಕ್ಷನ್ ಅನುಸರಿಸಿ ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿ ಹೋಬಳಿಯನ್ನ ದೊಡ್ಡಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಯಿಂದ ಚಿಕ್ಕಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಗೂ ಮತ್ತು ಚಿಂತಾಮಣಿ ತಾಲ್ಲೂಕು ಕೈವಾರ ಹೋಬಳಿಯನ್ನ ಚಿಕ್ಕಬಳ್ಳಾಪುರದ ಮುನಸೀಫರ ಸಿವಿಲ್ ಎಕ್ತ್ಯಾರಿಯಿಂದ ಕೋಲಾರದ ಮುನಸೀಫರ ಸಿವಿಲ್ ಎಕ್ತ್ಯಾರಿಗೂ, 1904ನೆ ಜನವರಿ ಗುರ್ರೆ ತಾರೀಖಿನಾರಭ್ಯ ವರ್ಗ ಮಾಡತಕ್ಕದ್ದೆಂದು ಮೈಸೂರು ಶೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 6ನೆ ನವಂಬರ್ 1903.

ನಂ. 926—ಜು., ಸನ್ 1883ನೆ ಇಸವಿಯ Iನೆ ನಂಬರ್ ಮೈಸೂರ ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 1903ನೆ ಸೆಪ್ಟಂಬರ 14ನೆ ಮುರ್ಕುಂ 623—ಜು. ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಹುಕ್ಕುಂ ಮಾಡಲ್ಪಟ್ಟಿದ್ದ ಮೇರೆ ಮದ್ದಗಿರಿ ಮುನ್ಸೀಫರವರು ಬೇರೆ ಸ್ಥಳದಲ್ಲಿ ಕೆಲಸ ನೋಡುತ್ತಿರುವ ಕಾಲದಲ್ಲಿ, ತುಮಕೂರ ಮುನ್ಸೀಫರ ಎಖ್ತ್ಯಾರಿಗೊಳಪಟ್ಟ ಸ್ಥಳೀಕ ಸರಹದ್ದುಗಳು ಮದ್ದಗಿರಿ ಮುನ್ಸೀಫರವರ ಸ್ಥಳೀಕ ಸರಹದ್ದುಗಳೂ ಸಹಾ ಸೇರಿರತಕ್ಕದ್ದೆಂದು ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 6ನೆ ನವಂಬರ್ 1903.

ನಂ. 1701—ಲೋ. ಫಂ. 71—02, ಬೋರ್ಡಿನ ಅನೇಕ ಮೀಟಿಂಗುಗಳಿಂದ ಗೈರ್ಹಾಜರಾಗಿರುವವರಿಗೆ ಬದಲಾಗಿ ಚಿಂತಾಮಣಿ ಮ್ಯುನಿಸಿಪಲ್ ಬೋರ್ಡಿನ ಮೆಂಬರುಗಳಾಗಿ ಇರಲಿಕ್ಕೆ ಮೊಕರರೂರು ಮಾಡಲ್ಪಟ್ಟ ದೊಡ್ಡಮನುಷ್ಯರ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಲ್ಪಟ್ಟಿರುತ್ತದೆ:—

	ಹೊಸದಾಗಿ ಮೊಕರರೂಕು ಮಾಡಲ್ಪಟ್ಟ ಮೆಂಬರುಗಳು.		ಹಳೇ ಮೆಂಬರುಗಳು.
1.	ಪಟೇಲ್‌ರಾದ ಮೆ|| ಕೃಷ್ಣಾಚಾರ್ರು	..	ಮೆ|| ನರಸಣ್ಣನವರು.
2.	ವರ್ತಕರು ವ ಜಮೀನ್ದಾರ್ರಾದ ಮೆ|| ಚೌಡರಡ್ಡಿಯವರು	..	,, ಸೀತಾರಾಮಯ್ಯನವರು.
3.	ಕೆಲಸದಿಂದ ನಿವೃತ್ತರಾದ ತಾಲ್ಲೂಕು ಶಿರಸ್ತೆದಾರ್ ಮೆ|| ಸೂರ್ಯನಾರಣಪ್ಪನವರು	}	,, ದಾಸಣ್ಣನವರು.

ತಾರೀಖು 7ನೆ ನವಂಬರ್ 1903.

ನಂ. 1718—ಲೋ. ಫಂ. 69-97, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ತುಮಕೂರ ಡಿಸ್ಟ್ರಿಕ್ಟಿನ ಮಾವತ್ತೂರಲ್ಲಿರುವ ಇನ್ಸ್ಪೆಕ್ಷನ್ ಬಂಗ್ಲೆಯು ಮೂರನೇ ಕ್ಲಾಸಿನ ಮುಸಾಫರ್ ಬಂಗ್ಲೆಯಾಗಿ ಬದಲಾಯಿಸಲ್ಪಟ್ಟಿರುತ್ತದೆ.

ತಾರೀಖು 10ನೆ ನವಂಬರ್ 1903.

ನಂ. 1750—ಲೋ. ಫಂ. 75—02, ಕಾಲಾತಿಕ್ರಮಣವಾದ ಮೆಂಬರುಗಳಿಗೆ ಬದಲಾಗಿ ಚಿಕ್ಕಬಳ್ಳಾಪುರದ ಮ್ಯುನಿಸಿಪಲ್ ಬೋರ್ಡಿನ ಮೆಂಬರುಗಳಾಗಿರಲಿಕ್ಕೆ ಮೊಕರರ್ಮಾಡಲ್ಪಟ್ಟ ದೊಡ್ಡಮನುಷ್ಯರುಗಳ ಇದರಡೀ ಕಂಡ ಪಟ್ಟಿಯು ತಿಳುವಳಿಕೆ ಬಗ್ಗೆ ಫಾಯಿಷ್ಮಾಡಲ್ಪಟ್ಟಿರುತ್ತದೆ:—

	ಹೊಸ ಮೆಂಬರುಗಳು.		ಕಾಲಾತಿಕ್ರಮಣವಾದ ಮೆಂಬರುಗಳು.
1.	ಪ್ಲೀಡರಾದ ಮೆ|| ಜಿ. ಸುಬ್ಬರಾಯರು	...	ಮೆ|| ಅರುಣಾಚಲ ಶಾಸ್ತ್ರಿಯವರು.
2.	ವರ್ತಕರಾದ ಮೆ|| ದೊಡ್ಡ ನರಸಿಹ್ಮಯ್ಯನವರು	...	ಮೆ|| ರಾಚಯ್ಯಸೆಟ್ಟಿಯವರು.
3.	ವರ್ತಕರಾದ ಮೆ|| ಎಚ್. ವೀರಂಣನವರು	...	ಮೆ|| ಪಾಪಂಣನವರು.

ತಾರೀಖು 6ನೆ ನವಂಬರ್ 1903.

ನಂ. 369—ಎಕ್ಸೈ. ಫೈ. 5-1901, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಎಕ್ಸೈಜ್ ಇಲಾಖೆಯ ಅಸಿಸ್ಟೆಂಟ್ ಕಮಿಷನರಾದ ಮೆ|| ಟಿ. ಬಾವಾರಾಯರಿಗೆ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 5ನೆ ನವಂಬರ್ 1903.

ನಂ. ರೆ. 1204, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 218ನೆ ಆರ್ಟಿಕಲ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರಾದ ಮೆ|| ಕೆ. ಕೃಷ್ಣೈಯ್ಯರ್‌ಯವರಿಗೆ 1903ನೆ ಜುಲೈ 22ನೆ ತಾರೀಖಿನಾರಭ್ಯ ಮೆಡಿಕಲ್ ಸರಟಿಫಿಕೇಟಿನ ಮೇಲೆ 6 ತಿಂಗಳುಗಳ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 2ನೆ ನವಂಬರ 1903.

ನಂ. ರೆ. 1174, ಸರ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಟ್ಯಾನರಿ ರಸ್ತೆಯಲ್ಲಿ ಬೆಂಗಳೂರ ಸಿವಿಲ್ ವ ಮಿಲಿಟರಿ ಸ್ಟೇಷರ್ ಮ್ಯುನಿಸಿಪಾಲಿಟಿಯ ಗೊಬ್ಬರದ ಡಿಪೋವಿಗೋಸ್ಕರ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷರ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಹೊಂದಬೇಕಾಗಿರುವ ಜಮೀನಿನ ವಿವರ.			ಚಕ್ಕುಬಂದಿ.			
					ಎಸ್. ನಂ.	ವಿಸ್ತೀರ್ಣ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎಕರೆ.	ಗುಂಟೆ.				
			ಸೇಬಿನ ಹಳ್ಳಿ ಖಾಯಂ	ಬಿ. ವೆಂಕಟರಾಮ್ಯೈಯ್ಯ.	...	1	...	ಕಾಚರಕನಹಳ್ಳಿ ಸರಹದ್ದು ಮತ್ತು ಹಾಲಿ ಗೊಬ್ಬರದ ಡಿಪೋ	ಬಿ. ವೆಂಕಟರಾಮ್ಯೈಯ್ಯನ ಜಮೀನಿನ ಮಿಕ್ಕ ಭಾಗಾ	ರಾಯಪ್ಪನ ಹೊಲಾ	ಭೈರಪ್ಪನ ಹೊಲಾ

ತಾರೀಖು 6ನೆ ನವಂಬರ 1903.

ನಂ. ರೆ. 1218, ಮೈಸೂರ ಸರ್ವಿಸ್ ರೆಗ್ಯುಲೇಷರ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಡೆಪ್ಯುಟಿ ಅಮಲ್ದಾರರಾದ ಸಿ. ಕೇಶವ ಯ್ಯಂಗಾರ್ರಿಗೆ 1903ನೆ ಜುಲೈ ಗುರ್ರ್ರ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ. 1903ನೆ ಜುಲೈ 1ನೆ ಮರ್ಕುಂ ರೆ. 352–3ನೆ ಗವರ್ನಮೆಂಟ ಆರ್ಡರನಲ್ಲಿ ಹುಕುಂ ಮಾಡಲ್ಪಟ್ಟಿದ್ದ ಮೇರೆ ಅವರು ಕೆಲಸದಿಂದ ನಿವೃತ್ತರಾಗೋಣ ವು ಸದರೀ ರಜಾ ಪೂರೈಸಿದನಂತರ ಕೂಡ್ಲೆ ಜಾರೀಲಿ ಬರತಕ್ಕದ್ದು.

ತಾರೀಖು 7ನೆ ನವಂಬರ 1903.

ನಂ. ರೆ. 1233, ಸರ್ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷರ್ ರೆಗ್ಯುಲೇಷನಿನ 6ನೆ ಸೆಕ್ಷರ್ ಅನುಸರಿಸಿ ೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರು ಡಿಸ್ಟ್ರಿಕ್ಟು ಗು ತಾಲ್ಲೂಕು ಕೊಡಿಗೇಹಳ್ಳಿ ಗ್ರಾಮವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತವೆ. 1903ನೆ ಸೆಪ್ಟಂಬರ 4ನೆ ಮ –7—ಲೋ. ಫಂ. 56–03ನೆ ನಂಬರ ಗವರ್ನಮೆಂಟ ಪ್ರೊಸೀಡಿಂಗ್ಸನ್ನು ನೋಡತಕ್ಕದ್ದು.

ರ್

ಜಮೀನಿನ ವಿವರ.				ಬೇಕಾಗಿರುವ ಜಮೀನು.		ಚಕ್ಕುಬಂದಿ.			
ಸರ್ವೆ ನಂ.	ವಿವರ.	ವಿಸ್ತೀರ್ಣ.	ಆಕಾರ.	ವಿಸ್ತೀರ್ಣ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
5	ಖುಷ್ಕಿ	16–17	18–0–0	8–16	9–3–3	ಗ್ರಾಮನಿವೇಶನ ಮತ್ತು ಸರ್ವೆ ನಂ. 179ರ ಭಾಗ	ಸರ್ವೆ ನಂ. 117	ಸರ್ವೆ ನಂ. 175ರ ಭಾಗ	ಸರ್ವೆ ನಂ. 175ರ ಭಾಗ
117	ಡಿಟೋ	4—1	4–0–0	1–29	1–11–0	ಸರ್ವೆ ನಂ. 175	ಸರ್ವೆ ನಂ. 118	ಸರ್ವೆ ನಂ. 117ರ ಭಾಗ	ಸರ್ವೆ ನಂ. 117ರ ಭಾಗ
....	....	20-18	22–0–0	10–5	10–14–3				

ತಾರೀಖು 9ನೆ ನವಂಬರ್ 1903.

ನಂ ರೆ. 1247—ರೆ. ಫೈ. 2—1903-4, ಸ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ದೊಡ್ಡಬಳ್ಳಾಪುರದ ತಾಲ್ಲೂಕಿನ ಬ್ಯಾತದ ಹೊಸ ಗ್ರಾಮಕ್ಕೆ ಸೇರಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂ.		ಜುಮ್ಲಾ ವಿಸ್ತೀರ್ಣ.		ಆಕಾರ.			ಬೇಕಾಗಿರುವ ವಿಸ್ತೀರ್ಣ.		ಚಕ್ಕುಬಂದಿ.			
														ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ.	ಗು.	ರೂ.	ಆ.	ಪೈ.	ಎ.	ಗು.				
ಬೆಂಗಳೂರು	ದೊಡ್ಡಬಳ್ಳಾಪುರ	ಕಾಕೋಳು	ಶಿರಸಂದ್ರ	1. ಚಿಕ್ಕರಾಯ ಬಿನ್ ಚೆನ್ನ 2. ಶೀನಪ್ಪ ಬಿನ್ ವೆಂಕಟರಾಮಯ್ಯ 3. ಲಚ್ಚಮ್ಮ ಬಿನ್ ಪುಟ್ಟ	2	ಖುಷ್ಕಿ	9	28	15	0	0	9	27	ಸರ್ವೆ ನಂ. 4, 5 ವ 6	ಸರ್ವೆ ನಂ. 1 ವ 45	ಸರ್ವೆ ನಂ. 12	ಸರ್ವೆ ನಂ. 44
				1. ಅಕ್ಕಯ್ಯ ಕೋಂ ಬುಚ್ಚ 2. ಸಂಜೀವಿ ಮತ್ತು ನಾರಣಪ್ಪ 3. ಚಿಕ್ಕರಾಯ 4. ಶೀನಪ್ಪ	3	ಡಿಟೋ	7	21	11	0	0	7	21	ಬ್ಯಾತದ ಸರಹದ್ದುಗಳು	ಸರ್ವೆ ನಂ. 44	ಸರ್ವೆ ನಂ. 2 ವ 4	ಬ್ಯಾತದ ಸರಹದ್ದುಗಳು
				1. ಸಂಜೀವಿ ಮತ್ತು ನಾರಣಪ್ಪ 2. ಚಂದಾ ಬಿನ್ ಕಾಳಾ 3. ಅಕ್ಕಯ್ಯ ಕೋಂ ಬುಚ್ಚ	4	ಡಿಟೋ	6	..	9	8	0	6	...	ಡಿಟೋ	ಸರ್ವೆ ನಂ. 2	ಸರ್ವೆ ನಂ. 5	ಸರ್ವೆ ನಂ. 3 ಮತ್ತು ಬ್ಯಾತದ ಸರಹದ್ದುಗಳು
				1. ಲಕ್ಷಿ [illegible]	5	ಡಿಟೋ	3	10	5	8	0	3	10	ಡಿಟೋ	ಡಿಟೋ	ಸರ್ವೆ ನಂ. 6	ಸರ್ವೆ ನಂ 4
					[illegible]	ಡಿಟೋ	7	18	12	0	0	7	18	ಸವೆ	ಸರ್ವೆ ನಂ. 2,5 ವ 4	ಸರ್ವೆ ನಂ. 11	ಸರ್ವೆ ನಂ. 4 ವ 5
							33	37	53	0	0	33	36				

ತಾರೀಖು 9ನೆ ನವಂಬರ 1903.

ನಂ. ಫೈ. 1226—ರೆ. ಫೈ. 31—1896-97, ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಗವರ್ನಮೆಂಟಿನ ಕಂಟ್ರೋಲರಾದ ಮೆ|| ಇ. ಆರ್. ಸುಬ್ರಾಯರ್ ಯವರು, 1903ನೆ ಸೆಪ್ಟಂಬರ 24ನೆ ತಾರೀಖಿನ ಮಧ್ಯಾನ್ಹಾತ್ಪರ ಕಂಟ್ರೋಲರ್ರವರ ಆಫೀಸಿನ ಚಾರ್ಜನ್ನು ಆಫೀಷಿಯೇಟಿಂಗ್ ಕಂಟ್ರೋಲರವರಾದ ಮೆ|| ಹೆನ್ರಿ ಈಗಲ್ಸ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 10ನೆ ನವಂಬರ 1903.

ನಂ. ರೆ. 1268—ರೆ. ಫೈ. 6-1903—4, ಎಕ್ಸೈಸ್ ಕಮಿಷನರವರ ಆಫೀಸಿಗೆ ಶೇರಿದ ಆಕ್ಟಿಂಗ್ ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮೆ|| ಎನ್. ಗೋಪಾಲೈಯ್ಯಂಗಾರ್ರು ಅವರ ಕೆಲಸದಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ.

2. ಇದರಡೀ ಕಂಡ ಅಮಲ್ದಾರ್ರುಗಳ ಖಾಯಂಗಳು ವ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

1ನೆ ಕ್ಲಾಸ್ನಲ್ಲಿ ಖಾಯಂ ಮಾಡಲ್ಪಟ್ಟವರು.

(1) ಮೆ|| ವಿ. ಕಂಠೀರವಾಚಾರ್ರು	(2) ಮೆ|| ಪಿ. ಸುಬ್ರಾಯುಲು ನಾಯುಡುಯವರು.

2ನೆ ಕ್ಲಾಸನಲ್ಲಿ ಖಾಯಂ ಮಾಡಲ್ಪಟ್ಟವರು.

(1) ಮೆ|| ಬಿ. ರಾಮಸ್ವಾಮೈಯ್ಯನವರು	(2) ಮೆ|| ಎ. ಕೃಷ್ಣ ಅರಸಿನವರು

3ನೆ ಕ್ಲಾಸ್ನಲ್ಲಿ ಖಾಯಂ ಮಾಡಲ್ಪಟ್ಟವರು.

(1) ಮೆ|| ಡಿ. ಸುಬ್ಬರಾಯರು	(2) ಮೆ|| ಎಂ. ರಂಗನಾಥರಾಯರು

3ನೆ ಕ್ಲಾಸ್ನಿಂದ 2ನೆ ಕ್ಲಾಸಿಗೆ ಆಕ್ಟಿಂಗ್ ತರೀಖು ಬಡ್ತಿ ಮಾಡಲ್ಪಟ್ಟವರು.

(1) ಮೆ|| ಆರ್. ಮಹದೇವರಾಯರು	(3) ಮೆ|| ವಿ. ಎನ್. ಗುರುರಾಯರು
(2) ,, ಟಿ. ಕೆ. ಸುಂದರರಾಜೈಯ್ಯಂಗಾರ್ರು	

4ನೆ ಕ್ಲಾಸ್ನಿಂದ 3ನೆ ಕ್ಲಾಸಿಗೆ ಆಕ್ಟಿಂಗ್ ತರೀಖು ಬಡ್ತಿ ಮಾಡಲ್ಪಟ್ಟವರು.

(1) ಮೆ|| ಟಿ. ಆರ್. ವೆಂಕಟರಾಮೈಯ್ಯನವರು	(3) ಮೆ|| ಬಿ. ಎಸ್. ರಾಣೋಜಿರಾಯರು
(2) ,, ಹೆಚ್. ಎಸ್. ವೆಂಕಟಾಚಾರ್ರು	

ತಾರೀಖು 11ನೆ ನವಂಬರ 1903.

ನಂ. ರೆ. 1276, ಮೆ|| ಬಿ. ರಾಮಸ್ವಾಮಯ್ಯನವರು ಇತರ ಕೆಲಸದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕೋಲಾರ ಡೆಪ್ಯುಟಿ ಕಮಿಷನರವರ ಆಫೀಸ್ ಜುಡಿಷಿಯಲ್ ಹೆಡ್‌ಮುನ್ಷೀರಾದ ಎಸ್. ಧರ್ಮರಾಯರು ಚಿಂತಾಮಣಿ ತಾಲ್ಲೂಕಿನ ಅಮಲ್ದಾರ್ ವ 3ನೆ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಖಾ ಮೊಕರರ್ರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೆ ನವಂಬರ 1903.

ನಂ. ರೆ. 1281, ಸನ್1888ನೆ ಇಸವಿಯ IVನೆ ನಂಬರ್ ರೆಗ್ಯುಲೇಷನ್ ಆದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ, ಇದರಡೀ ಕಂಡ ಪರಭಾರೆಯಾದ ಗ್ರಾಮಗಳಿಗೆ ಸದರಿ ಕೋಡಿನ VIIರಿಂದ Xರ ವರಿಗಿನ ಅಧ್ಯಾಯಗಳ ನಿಯಮಗಳನ್ನು ಲಗಾವ್ ಮಾಡುವ ಬಗ್ಯೆ ಮೈಸೂರ ಶೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.
ಕೋಲಾರ	ಕಾತ್ತೂರು	ಪರೆ ಹೊಸಹಳ್ಳಿ (ಕೆ. ಜಿ.)
ಡಿಟೋ	ವೇಮಗಲ್	ವೀರೇನಹಳ್ಳಿ (ಕೆ. ಜಿ.)
ಟಿ. ನರಸೀಪುರ	ರಂಗಸಮುದ್ರ	ಜೋಡಿ ಮುತ್ತತ್ತಿ

ಹುಕುಂ ಬಮೋಜೀಬ್,
ಹೆಚ್. ವಿ. ನಂಜುಂಡೈಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟೆರಿ.

ಮುಜರ್ರೈ.

ನೋಟಿಫಿಕೇಷನ್.

ತಾರೀಖು 9ನೆ ನವಂಬರ 1903.

ನಂ. 1079, ಮೆ|| ಎಂ. ಎಸ್. ನಾರಾಯಣರಾಯರು, ಶಿವಮೊಗ್ಗ ರೈಲ್ವೆ ಸ್ಟೇಷನ್ ಸಮೀಪದಲ್ಲಿ ತಮ್ಮ ಚಿಕ್ಕಪ್ಪನವರಿಂದ ಕಟ್ಟಲ್ಪಟ್ಟ ಶ್ರೀ ಅರಕೇಶ್ವರಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಯೆ ವಿಶಿಷ್ಟ ಧರ್ಮದರ್ಶಿಯರಾಗಿ ಮೊಕರರ್ರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರ್ರೈ ಇಲಾಖೆಯ ಡೆಪ್ಯುಟಿ ಸೆಕ್ರಿಟೆರಿ.